ವರದಿಗಳನ್ನೊಪ್ಪಿಸುವುದು

ಶ್ರೀ ಬಿ. ಶಿವರಾಮು (ಗಂಡಸಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಉದ್ಯಮಗಳ ಸಮಿತಿಯ 70-71ನೇ ವರದಿಯನ್ನು ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವರ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ವೀರಪ್ಪನಗೆ ಜೀವದಾನ ನೀಡುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಈಗಾಗಲೇ ನಾವು ಒಂದು ಚೀಟಿಯನ್ನು ಕೊಟ್ಟು ತಮ್ಮ ಅಪ್ಪಣೆಯನ್ನು ಪಡೆದಿದ್ದೇನೆ. ಇವೊತ್ತು ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇಡೀ ಸದನದ ಒಂದು ಅಭಿಪ್ರಾಯ ಇದೆ. ಆದರೆ ಇವೊತ್ತು ಪತ್ರಿಕೆಯಲ್ಲಿ ಒಂದು ದೊಡ್ಡದಾಗಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ವೀರಪ್ಪನ್‌ಗೆ ಜೀವದಾನ ಅಥವಾ ಅಮ್‌ನೆಸ್ಟಿ ಕೊಡಬೇಕು ಎಂದು ಸರ್ಕಾರದವರು ಒಪ್ಪಿಕೊಂಡು ಒಂದು ಪತ್ರವನ್ನು ಬರೆದಿದ್ದಾರೆ ಮತ್ತು ತಮಿಳುನಾಡು ಮತ್ತು ಕರ್ನಾಟಕ ಸರ್ಕಾರ ಇಬ್ಬರೂ ಕೂಡ ಇದಕ್ಕೆ ಒಪ್ಪಿಕೊಂಡಿದ್ದಾರೆ ಹಾಗಯೇ ವೀರಪ್ಪನ್ ಏನೇನು ಕಂಡಿಷನ್ ಹಾಕಿದ್ದಾನೆ ಅದಕ್ಕೆ ಎಲ್ಲಾ ಒಪ್ಪಿಕೊಂಡು ಸರ್ಕಾರದವರು ಆ ಪತ್ರವನ್ನು ಬರೆದಿದ್ದಾರೆ ಎಂದು ಗೊತ್ತಾಗಿದೆ. ಆದಕಾರಣ ಅದರ ಬಗ್ಗೆ ಸರ್ಕಾರದವರು ಹೇಳಬೇಕು. ಈಗಾಗಲೇ ಒಂಭತ್ತು ಜನರ.....

MR. SPEAKER : To set the record straight. ಈಗ ಅಮ್‌ನೆಸ್ಟಿ ಎಂದು ಪತ್ರಿಕೆಗಳಲ್ಲೂ ಪ್ರಚಾರ ಆಗಿದೆ. ಆದರೆ ಸರ್ಕಾರಕ್ಕೆ ಅಮ್‌ನೆಸ್ಟಿ ಗ್ರಾಂಟ್ ಮಾಡುವ ಪವರ್ಸ್ ಇರುವುದಿಲ್ಲ. ಏಕೆಂದರೆ for whatever crimes, he has committed he will have to undergo the process of trials.

SRI. M. MALLIKARJUNA KHARGE : There are so many rumours. ಏಕೆಂದರೆ ಪತ್ರಿಕೆಗಳಲ್ಲಿ ಬರತಕ್ಕಂಥದ್ದನ್ನು ಜನರು ಓದುತ್ತಾರೆ. ಅದು ಇಲ್ಲ ಎನ್ನತಕ್ಕಂಥದ್ದು ಜನರಿಗೆ ಸ್ಪಷ್ಟವಾಗಬೇಕಲ್ಲಾ.

MR. SPEAKER : With due respect to our friends in the Press, sometimes, I do not know what kind of attitude they take. ಅವರು ಅಮ್‌ನೆಸ್ಟಿ, ಅಮ್‌ನೆಸ್ಟಿ ಎಂದು ಬರೆಯುತ್ತಾ ಹೋಗುತ್ತಿದ್ದಾರೆ. ಈ ಎಲ್ಲಾ ಅಪರಾಧಗಳಿಗೂ ಕೂಡ ಕೋರ್ಟಿನಲ್ಲಿ ವಿಚಾರಣೆ ಆಗಬೇಕು. ಈ ಕೆಳಗಿನ ಕೋರ್ಟಿನಲ್ಲಿ ಶಿಕ್ಷೆ ಆದರೆ ಮೇಲು ಕೋರ್ಟಿಗೆ ಹೋಗಬೇಕು.